ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

25

ಇಲಾಖೆ / ವಿಷಯ : DEPARTMENT / SUBJECT: ಹೈಕೋರ್ಟ್ ಆದೇಶ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ   ದಿನಾಂಕ : DATE 15/12/20

**ಅಪರೂಪದ ಪ್ರಸಂಗ** ಕಾನೂನಾತ್ಮಕ ಸಮಸ್ಯೆ ಇತ್ಯರ್ಥದ ಹೊಣೆ ಹೈಕೋರ್ಟ್ ವಿಸ್ತೃತ ಪೀಠಕ್ಕೆ?


# ಮಕ್ಕಳ ದೌರ್ಜನ್ಯ ಕೇಸಲ್ಲಿ ಎರಡು ನ್ಯಾಯಪೀಠಗಳಿಂದ ಭಿನ್ನ ತೀರ್ಪು!

• **ವೆಂಕಟೇಶ್ ಕಲಿಪಿ**

**ಕನ್ನಡಪ್ರಭ ವಾರ್ತೆ** ಬೆಂಗಳೂರು 15/12/20

ಮಕ್ಕಳ ಮೇಲಿನ ಲೈಂಗಿಕ ಅಪರಾಧ ಪ್ರಕರಣಗಳಲ್ಲಿ ವಿಚಾರಣೆ ವಿಳಂಬವಾದರೆ ಆರೋಪಿಗೆ ಜಾಮೀನು ಪಡೆಯುವ ಹಕ್ಕಿನ ಸಂಬಂಧ ಹೈಕೋರ್ಟ್‌ನ 2 ಪೀಠಗಳು ಭಿನ್ನ ಆದೇಶ ನೀಡಿರುವುದರಿಂದ ಉದ್ಭವವಾಗಿರುವ ಕಾನೂನಾತ್ಮಕ ಸಮಸ್ಯೆಯನ್ನು ಇದೀಗ ಹೈಕೋರ್ಟ್‌ನ 'ವಿಸ್ತೃತ ಪೀಠ' ಇತ್ಯರ್ಥ ಮಾಡಬೇಕಾದಂತಹ ಅಪರೂಪದ ಪ್ರಸಂಗ ಎದುರಾಗಿದೆ.

ಮಕ್ಕಳ ಸಂರಕ್ಷಣಾ ಕಾಯ್ದೆ-2012ರ (ಪೋಕ್ಸೋ) ಪ್ರಕಾರ ಪೋಕ್ಸೋ ವಿಶೇಷ ವಿಚಾರಣಾ ನ್ಯಾಯಾಲಯ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಕಾಗ್ನಿಜೆನ್ಸ್ ತೆಗೆದುಕೊಂಡ 1 ತಿಂಗಳಲ್ಲಿ ಸಂತ್ರಸ್ತೆಯ ಸಾಕ್ಷ್ಯ ದಾಖಲಿಸಿಕೊಳ್ಳಬೇಕು. ವರ್ಷದೊಳಗೆ ವಿಚಾರಣೆ ಪೂರ್ಣ ಗೊಳಿಸಬೇಕು. ಈ 2 ನಿಯಮ ಪಾಲನೆಯಾಗದ ಸಂದರ್ಭ ಜಾಮೀನು ಮೇಲೆ ಬಿಡುಗಡೆಯಾಗುವ ಹಕ್ಕು ಆರೋಪಿ ಪಡೆಯುತ್ತಾನೆಯೇ, ಅಪರಾಧ ದಂಡ ಪ್ರಕ್ರಿಯಾ ಸಂಹಿತೆ (ಸಿಆರ್‌ಪಿಸಿ) ಸೆಕ್ಷನ್ 164 ಅಡಿ ದಾಖಲಿಸಿದ ಸಂತ್ರಸ್ತರ ಹೇಳಿಕೆಯು ಪೋಕ್ಸೋ ಕಾಯ್ದೆ ಸೆಕ್ಷನ್ 35(1) ಅಡಿ ಸಾಕ್ಷ್ಯವಾಗಿ ಪರಿಗಣಿಸಬಹುದೇ ಎಂಬ ಪ್ರಶ್ನೆ ಪರಿಹರಿಸಲು ವಿಸ್ತೃತ ಪೀಠ ರಚಿಸಬೇಕೆಂದು ನ್ಯಾ.



**ಹೈಕೋರ್ಟ್ ಇತಿಹಾಸದಲ್ಲಿ ಇದು ಅಪರೂಪದ ಪ್ರಸಂಗ**

ಬಿ.ಎ.ಪಾಟೀಲ್ ಅವರ ಏಕಸದಸ್ಯ ಪೀಠ ಪ್ರಕರಣವೊಂದರ ಆದೇಶದಲ್ಲಿ ಅಭಿಪ್ರಾಯಪಟ್ಟಿದೆ.

'ಪ್ರಕರಣವೊಂದರಲ್ಲಿ ವಿಚಾರಣೆಯ ವಿಳಂಬ ಕಾರಣಕ್ಕಾಗಿ ಆರೋಪಿಗೆ ಜಾಮೀನು ಪಡೆವ ಹಕ್ಕಿಲ್ಲ' ಎಂಬುದಾಗಿ ಹೈಕೋರ್ಟ್‌ನ ಏಕಸದಸ್ಯ ಪೀಠವೊಂದು ಆದೇಶಿಸಿದೆ. ಆದರೆ, 'ಜಾಮೀನು ಪಡೆವ ಹಕ್ಕು ಆರೋಪಿ ಹೊಂದುತ್ತಾನೆ' ಎಂದು ಮತ್ತೊಂದು ಪೀಠ ಆದೇಶಿಸಿದೆ. ಹೀಗಾಗಿ ಇದರ ಇತ್ಯರ್ಥಕ್ಕೆ ಪೂರ್ಣ, ವಿಸ್ತೃತ ಅಥವಾ ಸಾಂವಿಧಾನಿಕ ಪೀಠ ರಚಿಸಬೇಕಾಗಿದೆ. ಈ ಸಂಬಂಧ ಮುಖ್ಯ ನ್ಯಾಯಮೂರ್ತಿಗಳು ಆದೇಶ ಹೊರಡಿಸುವುದು ಬಾಕಿ ಇದೆ.

**ಪ್ರಕರಣವೇನು?:** ಅಪ್ರಾಪ್ತೆ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿರುವ ಉಡುಪಿಯ ಹನುಮಂತ ಮೊಗವೀರ ಎಂಬಾತ ಜಾಮೀನು ಕೋರಿ ಹೈಕೋರ್ಟ್‌ಗೆ ಕ್ರಿಮಿನಲ್ ಅರ್ಜಿ ಸಲ್ಲಿಸಿದ್ದ. ಆರೋಪಿ ಪರ ವಕೀಲರು, ದೋಷಾರೋಪ ಪಟ್ಟಿ ಸಲ್ಲಿಕೆಯಾಗಿದ್ದು ಆರೋಪಿ ನ್ಯಾಯಾಂಗ ಬಂಧನದಲ್ಲಿದ್ದಾನೆ. ಪೋಕ್ಸೋ ಕಾಯ್ದೆ ಸೆಕ್ಷನ್ 35(1) ಮತ್ತು (2) ಪಾಲನೆಯಾಗಿಲ್ಲ. ಇದರಿಂದ ಜಾಮೀನು ಮೇಲೆ ಬಿಡುಗಡೆ ಮಾಡಲು ಆರೋಪಿ ಅರ್ಹ ಎಂದು ವಾದಿಸಿ, ' ಪೂರಕವಾಗಿ 2017ರ 'ವಿನಯ್ ಮತ್ತು ಕರ್ನಾಟಕ ಸರ್ಕಾರ' ನಡುವಿನ ಪ್ರಕರಣದಲ್ಲಿ ಹೈಕೋರ್ಟ್‌ನ ಮತ್ತೊಂದು ಪೀಠ ಆರೋಪಿಗೆ ಜಾಮೀನು ನೀಡಿದೆ. ಹೀಗಾಗಿ, ಜಾಮೀನು ನೀಡಬೇಕು' ಎಂದು ಕೋರಿದರು.

**ವಿಚಾರಣೆ ವಿಳಂಬ-ಜಾಮೀನು ಹಕ್ಕು ಬರಲ್ಲ:** ಆ ವಾದ ತಿರಸ್ಕರಿಸಿದ ನ್ಯಾ.ಬಿ.ಎ.ಪಾಟೀಲ್ 'ಸಾಧ್ಯವಾದಷ್ಟು 1 ವರ್ಷದೊಳಗೆ ವಿಚಾರಣೆ ಪೂರ್ಣಗೊಳಿಸಬೇಕು. ಅಂದರೆ ಸಂತ್ರಸ್ತರ ಹಿತಾಸಕ್ತಿ ಹಾಗೂ ಆರೋಪಿಯ ಸ್ವಾತಂತ್ರ್ಯ ರಕ್ಷಣೆ ಉದ್ದೇಶದಿಂದ ಈ ಕಾನೂನು ರೂಪಿಸಲಾಗಿದೆ. ಸಾಕ್ಷ್ಯ ದಾಖಲಾಗದೆ ಪ್ರಕರಣ ದೀರ್ಘಾವಧಿಗುಳಿದರೆ ಸಂತ್ರಸ್ತೆ ಮೇಲೆ ಕಳಂಕ ಉಳಿಯುತ್ತದೆ. 1 ವರ್ಷದ ನಂತರವೂ ವಿಚಾರಣೆ ವಿಳಂಬವಾದ ಮಾತ್ರಕ್ಕೆ ಜಾಮೀನು ಮೇಲೆ ಬಿಡುಗಡೆ ಮಾಡುವ ಹಕ್ಕು ಆರೋಪಿಗೆ ಸೃಷ್ಟಿಯಾಗಿದೆ ಮತ್ತು ಹಕ್ಕು ಕ್ಲೇಮಿಗೆ ಸಮಯ ಕೂಡಿ ಬಂದಿದೆ ಎಂದರ್ಥವಲ್ಲ' ಎಂದು ಅಭಿಪ್ರಾಯಪಟ್ಟಿತು.